ಕರ್ನಾಟಕ ವಿಧಾನ ಸಭೆ
ಹದಿನಾಲ್ಕನೇ ವಿಧಾನ ಸಭೆ
ಹದಿಮೂರನೇ ಅಧಿವೇಶನ

# ಕರ್ನಾಟಕ ನ್ಯಾಯವಾದಿಗಳ ಕಲ್ಯಾಣ ನಿಧಿ (ತಿದ್ದುಪಡಿ) ವಿಧೇಯಕ, 2017

**(2017ರ ವಿಧಾನಸಭೆಯ ವಿಧೇಯಕ ಸಂಖ್ಯೆ-1)**

ಕರ್ನಾಟಕ ನ್ಯಾಯವಾದಿಗಳ ಕಲ್ಯಾಣ ನಿಧಿ ಅಧಿನಿಯಮ, 1983ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಒಂದು ವಿಧೇಯಕ.

ಇಲ್ಲಿ ಇನ್ನು ಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಕರ್ನಾಟಕ ನ್ಯಾಯವಾದಿಗಳ ಕಲ್ಯಾಣ ನಿಧಿ ಅಧಿನಿಯಮ, 1983ನ್ನು (1985ರ ಕರ್ನಾಟಕ ಅಧಿನಿಯಮ 2) ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು, ಭಾರತ ಗಣರಾಜ್ಯದ ಅರವತ್ತೆಂಟನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ, ಎಂದರೆ:-

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.**- (1) ಈ ಅಧಿನಿಯಮವನ್ನು ಕರ್ನಾಟಕ ನ್ಯಾಯವಾದಿಗಳ ಕಲ್ಯಾಣ ನಿಧಿ (ತಿದ್ದುಪಡಿ) ಅಧಿನಿಯಮ, 2017 ಎಂದು ಕರೆಯತಕ್ಕದ್ದು.

(2) ಇದು, ರಾಜ್ಯ ಸರ್ಕಾರವು, ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದಾದ ಅಂಥ ದಿನಾಂಕದಂದು ಜಾರಿಗೆ ಬರತಕ್ಕದ್ದು.

**2. 3ನೇ ಪ್ರಕರಣದ ತಿದ್ದುಪಡಿ.**- ಕರ್ನಾಟಕ ನ್ಯಾಯವಾದಿಗಳ ಕಲ್ಯಾಣ ನಿಧಿ ಅಧಿನಿಯಮ, 1983ರ (1985ರ ಕರ್ನಾಟಕ ಅಧಿನಿಯಮ 2) (ಇಲ್ಲಿ ಇನ್ನುಮುಂದೆ ಮೂಲ ಅಧಿನಿಯಮವೆಂದು ಉಲ್ಲೇಖಿಸಲಾಗಿದೆ) 3ನೇ ಪ್ರಕರಣದ (2)ನೇ ಉಪಪ್ರಕರಣದ (ಕೆ) ಖಂಡದಲ್ಲಿ "ಪ್ರವೇಶ ಫೀಜುಗಳ ಮೂಲಕ" ಎಂಬ ಪದಗಳಿಗೆ "ಪ್ರವೇಶ ಫೀಜುಗಳ ಮೂಲಕ ಮತ್ತು 23ಎ ಪ್ರಕರಣದ ಅಡಿಯಲ್ಲಿಯ ವಿಳಂಬ ಫೀಜನ್ನು ಒಳಗೊಂಡಂತೆ ಯಾವುದೇ ಇತರ ಫೀಜು ಮತ್ತು ದಂಡ ಅಥವಾ ವಂತಿಗೆ, ಯಾವುದಾದರೂ ಇದ್ದಲ್ಲಿ, ಅವುಗಳ ಮೂಲಕ" ಎಂಬ ಪದಗಳನ್ನು, ಅಂಕಿಗಳನ್ನು ಮತ್ತು ಅಕ್ಷರವನ್ನು ಅಲ್ಪವಿರಾಮ ಚಿಹ್ನೆಗಳೊಂದಿಗೆ ಪ್ರತಿಯೋಜಿಸತಕ್ಕದ್ದು.

**3. 15ನೇ ಪ್ರಕರಣದ ತಿದ್ದುಪಡಿ.**- ಮೂಲ ಅಧಿನಿಯಮದ 15ನೇ ಪ್ರಕರಣದಲ್ಲಿ,-

(1) (4)ನೇ ಉಪಪ್ರಕರಣದಲ್ಲಿ,-

(ಎ) "ಒಂದು ಸಾವಿರ ರೂಪಾಯಿಗಳ" ಮತ್ತು "ಐದುನೂರು ರೂಪಾಯಿಗಳ" ಎಂಬ ಪದಗಳಿಗೆ ಅನುಕ್ರಮವಾಗಿ "ಎರಡು ಸಾವಿರ ರೂಪಾಯಿಗಳ" ಮತ್ತು "ಒಂದು ಸಾವಿರ ರೂಪಾಯಿಗಳ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು;

(ಬಿ) ಮೊದಲನೇ ಪರಂತುಕದಲ್ಲಿ, "ಐವತ್ತು ರೂಪಾಯಿಗಳ" ಎಂಬ ಪದಗಳಿಗೆ "ಒಂದು ನೂರು ರೂಪಾಯಿಗಳ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು;

(ಸಿ) ಎರಡನೇ ಪರಂತುಕದಲ್ಲಿ, "ಹದಿನೈದು ಸಾವಿರ ರೂಪಾಯಿಗಳನ್ನು" ಎಂಬ ಪದಗಳಿಗೆ "ಇಪ್ಪತ್ತೈದು ಸಾವಿರ ರೂಪಾಯಿಗಳನ್ನು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

(ಡಿ) ಎರಡನೇ ಪರಂತುಕದ ತರುವಾಯ ಈ ಮುಂದಿನ ಪರಂತುಕಗಳನ್ನು ಸೇರಿಸತಕ್ಕದ್ದು, ಎಂದರೆ:-

"ಮತ್ತೂ ಪರಂತು, ಕರ್ನಾಟಕ ನ್ಯಾಯವಾದಿಗಳ ಕಲ್ಯಾಣ ನಿಧಿ (ತಿದ್ದುಪಡಿ) ಅಧಿನಿಯಮ, 2017ರ ಪ್ರಾರಂಭದ ದಿನಾಂಕಕ್ಕೆ ಮೊದಲು ಹದಿನೈದು ಸಾವಿರ ರೂಪಾಯಿಗಳ ಒಟ್ಟು ಮೊತ್ತವನ್ನು ಈಗಾಗಲೇ ಸಂದಾಯ ಮಾಡಿರುವ ಒಬ್ಬ ಸದಸ್ಯನು, ಅಂಥ ಪ್ರಾರಂಭದ ದಿನಾಂಕದಿಂದ ಒಂದು ವರ್ಷದೊಳಗೆ ಹತ್ತು ಸಾವಿರ ರೂಪಾಯಿಗಳ ಬಾಕಿ ಮೊತ್ತವನ್ನು ಸಂದಾಯ ಮಾಡತಕ್ಕದ್ದು ಅಥವಾ ಬಾಕಿ ತೀರುವವರೆಗೆ ಪ್ರತಿ ವರ್ಷದ ಡಿಸೆಂಬರ್ ಮೂವತ್ತೊಂದನೇ ದಿನಾಂಕದಂದು ಅಥವಾ ಅದಕ್ಕೆ ಮೊದಲು ಪ್ರತಿ ವರ್ಷಕ್ಕೆ ಶೇಕಡ 18ರ ಬಡ್ಡಿ ಸಹಿತ ಒಂದು ಸಾವಿರ ರೂಪಾಯಿಗಳ ಮೊತ್ತವನ್ನು ಪಾವತಿಸತಕ್ಕದ್ದು, ಇದಕ್ಕೆ ತಪ್ಪಿದ್ದಲ್ಲಿ, ಈ ಅಧಿನಿಯಮದ ಉದ್ದೇಶಕ್ಕಾಗಿ ಆತನು ನ್ಯಾಯವಾದಿ ವೃತ್ತಿಯನ್ನು ಸ್ವಇಚ್ಛೆಯಿಂದ ನಿಲ್ಲಿಸಿರುವುದಾಗಿ ಭಾವಿಸತಕ್ಕದ್ದು:

ಅಲ್ಲದೇ ಪರಂತು, ಒಬ್ಬ ಸದಸ್ಯನು, ಬಾಕಿ ದಿನಾಂಕವು ಮುಕ್ತಾಯವಾದಂದಿನಿಂದ ಒಂದು ವರ್ಷದೊಳಗೆ, ತಿಂಗಳೊಂದಕ್ಕೆ ಒಂದು ನೂರು ರೂಪಾಯಿಗಳ ದಂಡದೊಡನೆ, ಅಂಥ ಒಟ್ಟು ಮೊತ್ತದ ಬಾಕಿಯನ್ನು ಸಂದಾಯ ಮಾಡಿದಲ್ಲಿ, ನ್ಯಾಯವಾದಿ ವೃತ್ತಿಯನ್ನು ಸ್ವಇಚ್ಛೆಯಿಂದ ನಿಲ್ಲಿಸಿರುವುದಾಗಿ ಭಾವಿಸತಕ್ಕದ್ದಲ್ಲ."

(2) (6)ನೇ ಉಪಪ್ರಕರಣದಲ್ಲಿ,-

(ಎ) "ಐದು ಸಾವಿರ ರೂಪಾಯಿಗಳ" ಎಂಬ ಪದಗಳಿಗೆ "ಹತ್ತು ಸಾವಿರ ರೂಪಾಯಿಗಳ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

(ಬಿ) ಪರಂತುಕದಲ್ಲಿ "ಒಂದು ಲಕ್ಷ ರೂಪಾಯಿಗಳನ್ನು" ಎಂಬ ಪದಗಳಿಗೆ "ಎರಡು ಲಕ್ಷ ರೂಪಾಯಿಗಳನ್ನು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

(3) (6)ನೇ ಉಪಪ್ರಕರಣದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

"(7) ಈ ಅಧಿನಿಯಮದಲ್ಲಿ ಏನೇ ಒಳಗೊಂಡಿದ್ದರೂ,-

(ಎ) ಐವತ್ತು ವರ್ಷಗಳ ವೃತ್ತಿಯನ್ನು ಸಂಪೂರ್ಣಗೊಳಿಸಿದ ಮತ್ತು ನಿಧಿಗೆ ಎಲ್ಲಾ ಬಾಕಿಗಳನ್ನು ಸಂದಾಯ ಮಾಡಿದ; ಅಥವಾ

(ಬಿ) ನಲವತ್ತು ವರ್ಷಗಳ ವಯಸ್ಸು ಪೂರ್ಣಗೊಳಿಸುವ ಮೊದಲು ನ್ಯಾಯವಾದಿಯಾಗಿ ಎನ್‌ರೋಲ್ ಮಾಡಿಕೊಂಡು ಎಪ್ಪತ್ತೈದು ವರ್ಷಗಳ ವಯಸ್ಸನ್ನು ತಲುಪಿದ,

– ಯಾವೊಬ್ಬ ಸದಸ್ಯನು, (4)ನೇ ಉಪಪ್ರಕರಣದ ಅಡಿಯಲ್ಲಿ ಫೀಜು ಮತ್ತು ದಂಡವನ್ನು, ಯಾವುದಾದರೂ ಇದ್ದಲ್ಲಿ, ಸಂದಾಯ ಮಾಡಲು ಅಥವಾ 23ಎ ಪ್ರಕರಣದ (1) ಮತ್ತು (2) ಉಪಪ್ರಕರಣಗಳ ಅಡಿಯಲ್ಲಿ ವಂತಿಗೆ ಮತ್ತು ವಿಳಂಬ ಫೀಜನ್ನು ಸಂದಾಯ ಮಾಡಲು ವಿಫಲನಾದಲ್ಲಿ, ಆತನು ಅವುಗಳ ಹಿಂಬಾಕಿಯ ಕಡಿತವನ್ನು (4)ನೇ ಉಪಪ್ರಕರಣದ ಅಡಿಯಲ್ಲಿ ಬಾಕಿಯಿರುವ ಫೀಜು ಮತ್ತು ದಂಡ ಅಥವಾ 23ಎ ಪ್ರಕರಣದ (1) ಮತ್ತು (2) ಉಪಪ್ರಕರಣಗಳ ಅಡಿಯಲ್ಲಿ ಬಾಕಿಯಿರುವ ವಂತಿಗೆ ಅಥವಾ ವಿಳಂಬ ಫೀಜು ಇವುಗಳ ಹಿಂಬಾಕಿಯ ಕಡಿತವನ್ನು ಮಾಡದೇ 16ನೇ ಪ್ರಕರಣದ (1)ನೇ ಉಪಪ್ರಕರಣದ ಅಡಿಯಲ್ಲಿ ಪೂರ್ತಿ ಮೊತ್ತವನ್ನು ಕ್ಲೇಮು ಮಾಡಲು ಅರ್ಹನಾಗಿರತಕ್ಕದ್ದು."

**4. 16ನೇ ಪ್ರಕರಣದ ತಿದ್ದುಪಡಿ.**– ಮೂಲ ಅಧಿನಿಯಮದ 16ನೇ ಪ್ರಕರಣದಲ್ಲಿ,–

(1) (1)ನೇ ಉಪಪ್ರಕರಣದಲ್ಲಿ,

(ಎ) ಒಂದನೇ ಪರಂತುಕದಲ್ಲಿ,

(i) "ಒಂದು ಲಕ್ಷ ಐವತ್ತು ಸಾವಿರ ರೂಪಾಯಿಗಳಿಗೊಳಪಟ್ಟು" ಹಾಗೂ "ಐದು ಸಾವಿರ ರೂಪಾಯಿಗಳ" ಎಂಬ ಪದಗಳಿಗೆ ಅನುಕ್ರಮವಾಗಿ "ಮೂರು ಲಕ್ಷ ರೂಪಾಯಿಗಳಿಗೊಳಪಟ್ಟು" ಹಾಗೂ "ಹತ್ತು ಸಾವಿರ ರೂಪಾಯಿಗಳ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

(ii) (iii)ನೇ ಖಂಡಕ್ಕೆ, ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

"(iii) ಯಾವುದೇ ಉದ್ಯೋಗ, ಉಪವೃತ್ತಿ (avocation) ಅಥವಾ ವ್ಯವಹಾರದ ಉದ್ದೇಶಕ್ಕಾಗಿ ಅಥವಾ ಕೇಂದ್ರ ಸರ್ಕಾರ ಅಥವಾ ಯಾವುದೇ ರಾಜ್ಯ ಸರ್ಕಾರದ ಮೂಲಕ ರಚನೆಯಾದ, ಶಾಸನಬದ್ಧವಾದ ಅಥವಾ ಶಾಸನಬದ್ಧವಲ್ಲದ ಯಾವುದೇ ಆಯೋಗ, ನಿಗಮ, ಸಮಿತಿ, ಮಂಡಳಿ, ಸಂಸ್ಥೆ ಅಥವಾ ಇತರ ಪ್ರಾಧಿಕಾರದ ಅಧ್ಯಕ್ಷ, ಉಪಾಧ್ಯಕ್ಷ ಅಥವಾ ಸದಸ್ಯನ ಪದದಲ್ಲಿ ನೇಮಕವಾಗಲು ಮೂರು ವರ್ಷಗಳು ಮೀರಿದ ಅವಧಿಗಾಗಿ ಸ್ವಇಚ್ಛೆಯಿಂದ ವೃತ್ತಿಯನ್ನು ನಿಲ್ಲಿಸಿರುವ ಒಬ್ಬ ನ್ಯಾಯವಾದಿ;"

(ಬಿ) ಎರಡನೇ ಪರಂತುಕದಲ್ಲಿ "ಮೂರು ಸಾವಿರ ರೂಪಾಯಿಗಳ" ಹಾಗೂ "ಐವತ್ತು ಸಾವಿರ ರೂಪಾಯಿಗಳನ್ನು" ಎಂಬ ಪದಗಳಿಗೆ ಅನುಕ್ರಮವಾಗಿ "ಐದು ಸಾವಿರ ರೂಪಾಯಿಗಳ" ಹಾಗೂ "ಒಂದು ಲಕ್ಷ ರೂಪಾಯಿಗಳನ್ನು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

(2) (6)ನೇ ಉಪಪ್ರಕರಣದ ತರುವಾಯ ಈ ಮುಂದಿನ ಪರಂತುಕವನ್ನು ಸೇರಿಸತಕ್ಕದ್ದು, ಎಂದರೆ:-

"ಪರಂತು, ಫೀಜಿನ ಒಟ್ಟು ಮೊತ್ತವನ್ನು ಒಂದೇ ಬಾರಿಗೆ ಸಂದಾಯ ಮಾಡಲು ಆಯ್ಕೆ ಮಾಡಿಕೊಂಡ ಒಬ್ಬ ಸದಸ್ಯನು, ಸ್ವಇಚ್ಛಾ ನಿವೃತ್ತಿಯ ಆಧಾರದ ಮೇಲೆ ವೃತ್ತಿಯನ್ನು ಸಮಾಪ್ತಿಗೊಳಿಸಿದ ಕಾರಣಕ್ಕಾಗಿ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿದ ಮೊತ್ತವನ್ನು ಕ್ಲೇಮು ಮಾಡಲು ಅರ್ಜಿಯನ್ನು ಸಲ್ಲಿಸಿದಲ್ಲಿ, ಅಂಥ ಅರ್ಜಿಯನ್ನು ಸಲ್ಲಿಸುವ ಮೊದಲು, 15ನೇ ಪ್ರಕರಣದ (4)ನೇ ಉಪಪ್ರಕರಣದ ಎರಡು, ಮೂರು ಮತ್ತು ನಾಲ್ಕನೇ ಪರಂತುಕಗಳಲ್ಲಿ ನಿರ್ದಿಷ್ಟಪಡಿಸಿದ ಒಟ್ಟು ಮೊತ್ತವನ್ನು, ದಂಡದೊಂದಿಗೆ ಯಾವುದಾದರೂ ಇದ್ದಲ್ಲಿ, ಪಾವತಿಸಿರತಕ್ಕದ್ದು ಅಥವಾ ಮೊತ್ತವನ್ನು ಅಂತಿಮವಾಗಿ ಇತ್ಯರ್ಥಗೊಳಿಸುವ ಸಮಯದಲ್ಲಿ, ಒಟ್ಟು ಫೀಜು ಮತ್ತು ದಂಡ, ಯಾವುದಾದರೂ ಇದ್ದಲ್ಲಿ, ಅದನ್ನು ಒಂದೇ ಕಂತಿನಲ್ಲಿ ಕಳೆಯುವುದಕ್ಕೆ ಲಿಖಿತದಲ್ಲಿ ಒಪ್ಪಿಗೆಯನ್ನು ನೀಡತಕ್ಕದ್ದು.

(6ಎ) ಸ್ವಇಚ್ಛಾ ನಿವೃತ್ತಿಯ ಆಧಾರದ ಮೇಲೆ ವೃತ್ತಿಯನ್ನು ನಿಲ್ಲಿಸಿದ ಸದಸ್ಯರುಗಳಿಂದ (6)ನೇ ಉಪಪ್ರಕರಣದ ಅಡಿಯಲ್ಲಿ ಸ್ವೀಕರಿಸಲಾದ ಅರ್ಜಿಗಳ ಸಂದರ್ಭದಲ್ಲಿ, ಟ್ರಸ್ಟಿ ಸಮಿತಿಯು, ತನ್ನ ಆರ್ಥಿಕ ಸ್ಥಿತಿ, ನಿಧಿಯ ಭವಿಷ್ಯ ನಿರ್ವಹಣೆಯ ಸಾಧ್ಯತೆ, ಅರ್ಜಿದಾರನ ಅಗತ್ಯತೆ ಹಾಗೂ ಇತರ ಸಂಬಂಧಪಟ್ಟ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಈ ಪ್ರಕರಣದ ಅಡಿಯಲ್ಲಿ ಒಂದು ವರ್ಷದಲ್ಲಿ ಸಂದಾಯ ಮಾಡಲು ಪರಿಗಣಿಸಬಹುದಾದ ಅರ್ಜಿಗಳ ಒಟ್ಟು ಸಂಖ್ಯೆಯನ್ನು ನಿಗದಿಪಡಿಸತಕ್ಕದ್ದು."

**5. 16ಎ ಪ್ರಕರಣದ ತಿದ್ದುಪಡಿ.-** ಮೂಲ ಅಧಿನಿಯಮದ 16ಎ ಪ್ರಕರಣದ ಪರಂತುಕದಲ್ಲಿ "ಒಂದು ಲಕ್ಷ ರೂಪಾಯಿಗಳು" ಎಂಬ ಪದಗಳಿಗೆ "ಒಂದು ಲಕ್ಷದ ಐವತ್ತು ಸಾವಿರ ರೂಪಾಯಿಗಳು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

**6. 16ಬಿ ಪ್ರಕರಣದ ತಿದ್ದುಪಡಿ.-** ಮೂಲ ಅಧಿನಿಯಮದ 16ಬಿ ಪ್ರಕರಣದಲ್ಲಿ,-

(i) (1)ನೇ ಉಪಪ್ರಕರಣದಲ್ಲಿ, "ಎಪ್ಪತ್ತು ವರ್ಷ ವಯಸ್ಸು" ಎಂಬ ಪದಗಳಿಗೆ "ಅರವತ್ತೈದು ವರ್ಷ ವಯಸ್ಸು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

(ii) (2)ನೇ ಉಪಪ್ರಕರಣದಲ್ಲಿ, "ಅಥವಾ ಒಂದು ಲಕ್ಷ ರೂಪಾಯಿ" ಎಂಬ ಪದಗಳಿಗೆ "ಅಥವಾ ಒಂದು ಲಕ್ಷದ ಐವತ್ತು ಸಾವಿರ ರೂಪಾಯಿಗಳು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

**7. 21ನೇ ಪ್ರಕರಣದ ತಿದ್ದುಪಡಿ.**– ಮೂಲ ಅಧಿನಿಯಮದ 21ನೇ ಪ್ರಕರಣದ (2)ನೇ ಉಪಪ್ರಕರಣದಲ್ಲಿ (ಬಿ) ಖಂಡಕ್ಕೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:–

"(ಬಿ) ಬಾರ್ ಕೌನ್ಸಿಲ್ ಕಚೇರಿಯಲ್ಲಿ ಐದು ನೂರು ರೂಪಾಯಿಗಳನ್ನು ಸಂದಾಯ ಮಾಡಿದ ರಸೀದಿ."

**8. 23ನೇ ಪ್ರಕರಣದ ತಿದ್ದುಪಡಿ.**– ಮೂಲ ಅಧಿನಿಯಮದ 23ನೇ ಪ್ರಕರಣದಲ್ಲಿ,–

(i) (1)ನೇ ಉಪಪ್ರಕರಣಕ್ಕೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:–

"(1) ಪ್ರತಿಯೊಬ್ಬ ನ್ಯಾಯವಾದಿಯು, ಉಚ್ಚ ನ್ಯಾಯಾಲಯದಲ್ಲಿ ತಾನು ದಾಖಲು ಮಾಡಿದ ಪ್ರತಿಯೊಂದು ವಕಾಲತ್ತಿನ ಮೇಲೆ ಐವತ್ತು ರೂಪಾಯಿಗಳ ಮೌಲ್ಯದ ಮತ್ತು ಉಚ್ಚ ನ್ಯಾಯಾಲಯವನ್ನು ಹೊರತುಪಡಿಸಿ ಯಾವುದೇ ನ್ಯಾಯಾಲಯದಲ್ಲಿ ಅಥವಾ ಯಾವುದೇ ನ್ಯಾಯಾಧಿಕರಣದಲ್ಲಿ ಅಥವಾ ಯಾವುದೇ ಇತರ ಪ್ರಾಧಿಕಾರದಲ್ಲಿ ತಾನು ದಾಖಲು ಮಾಡಿದ ಪ್ರತಿಯೊಂದು ವಕಾಲತ್ತಿನ ಮೇಲೆ ಮೂವತ್ತು ರೂಪಾಯಿಗಳ ಮೌಲ್ಯದ ಕಲ್ಯಾಣ ನಿಧಿ ಸ್ಟಾಂಪುಗಳನ್ನು ಅಂಟಿಸತಕ್ಕದ್ದು ಮತ್ತು ಹಾಗೆ ಸ್ಟಾಂಪು ಮಾಡಿಲ್ಲದ ಯಾವುದೇ ವಕಾಲತ್ತನ್ನು ಉಚ್ಚ ನ್ಯಾಯಾಲಯ ಅಥವಾ ಯಾವುದೇ ನ್ಯಾಯಾಲಯ, ನ್ಯಾಯಾಧಿಕರಣ ಅಥವಾ ಇತರ ಪ್ರಾಧಿಕಾರದ ಮುಂದೆ ದಾಖಲು ಮಾಡತಕ್ಕದ್ದಲ್ಲ ಅಥವಾ ಸ್ವೀಕರಿಸತಕ್ಕದ್ದಲ್ಲ."

(ii) (1ಎ) ಉಪಪ್ರಕರಣದಲ್ಲಿ "ಐದು ರೂಪಾಯಿಗಳ" ಎಂಬ ಪದಗಳಿಗೆ "ಇಪ್ಪತ್ತು ರೂಪಾಯಿಗಳ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

**9. 23ಎ ಪ್ರಕರಣದ ತಿದ್ದುಪಡಿ.**– ಮೂಲ ಅಧಿನಿಯಮದ 23ಎ ಪ್ರಕರಣದ (1)ನೇ ಉಪಪ್ರಕರಣದಲ್ಲಿ "ಐದು ಸಾವಿರ ರೂಪಾಯಿಗಳನ್ನು" ಎಂಬ ಪದಗಳಿಗೆ "ಹತ್ತು ಸಾವಿರ ರೂಪಾಯಿಗಳನ್ನು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

**10. ಅನುಸೂಚಿಯ ಪ್ರತಿಯೋಜನೆ.**– ಮೂಲ ಅಧಿನಿಯಮದ ಅನುಸೂಚಿಗೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:–

**"ಅನುಸೂಚಿ**

**(16ನೇ ಪ್ರಕರಣದ (1)ನೇ ಉಪಪ್ರಕರಣವನ್ನು ನೋಡಿ)**

| **ವೃತ್ತಿ ಪೂರ್ಣಗೊಂಡ ವರ್ಷಗಳು** | **ಹಕ್ಕು ಹೊಂದಿರುವಿಕೆ** |
|---|---|
| (1) ಹದಿನೈದು ವರ್ಷಗಳಿಗೆ ಮೀರದಿದ್ದರೆ | ನಾಲ್ಕು ಲಕ್ಷ ರೂಪಾಯಿಗಳು |
| (2) ಹದಿನೈದು ವರ್ಷಗಳಿಗೆ ಮೀರಿದ್ದು ಆದರೆ ಮೂವತ್ತೈದು ವರ್ಷಗಳು ಮೀರದಿದ್ದರೆ | ಆರು ಲಕ್ಷ ರೂಪಾಯಿಗಳು |
| (3) ಮೂವತ್ತೈದು ವರ್ಷಗಳಿಗೆ ಮೀರಿದ್ದರೆ | ಎಂಟು ಲಕ್ಷ ರೂಪಾಯಿಗಳು" |

**11. ತಾತ್ಕಾಲಿಕ ಉಪಬಂಧ.**– ಈ ಅಧಿನಿಯಮದ ಮೂಲಕ ತಿದ್ದುಪಡಿಗೊಂಡ ಮೂಲ ಅಧಿನಿಯಮದಲ್ಲಿ ಏನೇ ಒಳಗೊಂಡಿದ್ದರೂ, ಟ್ರಸ್ಟಿ ಸಮಿತಿಯು, ಈ ಅಧಿನಿಯಮವು ಜಾರಿಯಾದ ದಿನಾಂಕದಿಂದ ಒಂದು ವರ್ಷದ ಅವಧಿಯವರೆಗೆ, ಮೂಲ ಅಧಿನಿಯಮದ 16ನೇ ಪ್ರಕರಣದ (6)ನೇ ಉಪಪ್ರಕರಣದ ಅಡಿಯಲ್ಲಿ ಸ್ವಇಚ್ಛಾ ನಿವೃತ್ತಿಯ ಆಧಾರದಲ್ಲಿ ವೃತ್ತಿ ಸಮಾಪನಗೊಂಡಿರುವ ಕ್ಲೇಮುಗಳ ಸಂದರ್ಭದಲ್ಲಿ, ಯಾವುದೇ ಅರ್ಜಿಯನ್ನು ಪುರಸ್ಕರಿಸತಕ್ಕದ್ದಲ್ಲ.

## ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

ಕರ್ನಾಟಕ ನ್ಯಾಯವಾದಿಗಳ ಕಲ್ಯಾಣ ನಿಧಿ ಅಧಿನಿಯಮ, 1983ಕ್ಕೆ (1985ರ ಕರ್ನಾಟಕ ಅಧಿನಿಯಮ 2) ಈ ಮುಂದಿನವುಗಳಿಗಾಗಿ, ಎಂದರೆ:-

(1) ನ್ಯಾಯವಾದಿಗಳ ಕಲ್ಯಾಣ ನಿಧಿಯ ವಾರ್ಷಿಕ ಸದಸ್ಯತ್ವ ಫೀಜನ್ನು ಈ ಮುಂದಿನವುಗಳಿಗಾಗಿ, ಎಂದರೆ:-

(i) 15 ವರ್ಷಗಳ ವೃತ್ತಿಯನ್ನು ಪೂರ್ಣಗೊಳಿಸಿದವರಿಗೆ ರೂ.1,000 ದಿಂದ ರೂ.2,000ಕ್ಕೆ;

(ii) 15 ವರ್ಷಗಳ ವೃತ್ತಿಯನ್ನು ಪೂರ್ಣಗೊಳಿಸದಿರುವವರಿಗೆ ರೂ.500 ರಿಂದ ರೂ.1,000ಕ್ಕೆ; ಮತ್ತು

(iii) ವಿಫಲರಾದವರಿಗೆ ದಂಡವನ್ನು ರೂ.50 ರಿಂದ ರೂ.100ಕ್ಕೆ (15(4)ನೇ ಪ್ರಕರಣ).

- ಹೆಚ್ಚಿಸಲು;

(2) ಪ್ರತಿವರ್ಷವೂ ಶುಲ್ಕವನ್ನು ಸಂದಾಯ ಮಾಡುವುದಕ್ಕೆ ಬದಲಾಗಿ ಒಂದೇ ಕಂತಿನಲ್ಲಿ ಸಂದಾಯ ಮಾಡುವ ಶುಲ್ಕವನ್ನು ರೂ.15,000ದಿಂದ ರೂ.25,000ಕ್ಕೆ ಹೆಚ್ಚಿಸಲು (15(4)ನೇ ಪ್ರಕರಣ);

(3) ಐದು ವರ್ಷಗಳಿಗಿಂತ ಹೆಚ್ಚಾಗಿ ವೃತ್ತಿಯನ್ನು ನಿಲ್ಲಿಸಿದ ಕಾರಣದಿಂದಾಗಿ ಭಾವಿತ ವೃತ್ತಿ ನಿಲ್ಲಿಸಿರುವಿಕೆಗೆ ಸಂದಾಯ ಮಾಡಬೇಕಾದ ಮೊತ್ತವನ್ನು ರೂ. ಒಂದು ಲಕ್ಷದಿಂದ ರೂ. ಎರಡು ಲಕ್ಷಗಳಿಗೆ ಹೆಚ್ಚಿಸಲು (15(6)ನೇ ಪ್ರಕರಣ);

(4) ಸದಸ್ಯತ್ವವು ನಿಂತು ಹೋದಾಗ ಸದಸ್ಯ ಅಥವಾ ನಾಮನಿರ್ದೇಶಿತ ಅಥವಾ ಕಾನೂನು ಸಮ್ಮತ ವಾರಸುದಾರರಿಗೆ ನಿಧಿಯಿಂದ ಸಂದಾಯ ಮಾಡುವುದನ್ನು ಗರಿಷ್ಠ ರೂ.1.5 ಲಕ್ಷದಿಂದ ರೂ.3.00 ಲಕ್ಷಕ್ಕೆ ಒಳಪಟ್ಟು ಪ್ರತಿಯೊಂದು ಪೂರ್ತಿಯಾದ ವರ್ಷಕ್ಕೆ ರೂ.5,000 ದಿಂದ ರೂ.10,000ದ ದರದಲ್ಲಿ ಮೊತ್ತವನ್ನು ಹೆಚ್ಚಿಸಲು (16(1)ನೇ ಪ್ರಕರಣ);

(5) ಯಾವುದೇ ಉದ್ಯೋಗದ ಕಾರಣದಿಂದಾಗಿ ಅಥವಾ ಕೇಂದ್ರ ಸರ್ಕಾರ ಅಥವಾ ಯಾವುದೇ ರಾಜ್ಯ ಸರ್ಕಾರವು ರಚಿಸಿದ, ಶಾಸನಬದ್ಧವಾದ ಅಥವಾ ಶಾಸನಬದ್ಧವಲ್ಲದ ಯಾವುದೇ ಆಯೋಗ, ನಿಗಮ, ಸಮಿತಿ, ಮಂಡಲಿ, ಸಂಸ್ಥೆ ಅಥವಾ ಯಾವುದೇ ಇತರ ಪ್ರಾಧಿಕಾರದ ಅಧ್ಯಕ್ಷರ, ಉಪಾಧ್ಯಕ್ಷರ ಪದಕ್ಕೆ ಅಥವಾ ಸದಸ್ಯನಾಗಿ ನೇಮಕವಾದಾಗ ಸ್ವಇಚ್ಛೆಯಿಂದ ವೃತ್ತಿಯನ್ನು ನಿಲ್ಲಿಸುವ ಕನಿಷ್ಠ ವೃತ್ತಿ ಅವಧಿಯನ್ನು ಎರಡು ವರ್ಷಗಳಿಂದ ಮೂರು ವರ್ಷಗಳಿಗೆ ವಿಸ್ತರಿಸಲು (16(1)(iii)ನೇ ಪ್ರಕರಣ);

(6) ವೈದ್ಯಕೀಯ ಪರಿಹಾರಕ್ಕಾಗಿ ಸಂದಾಯ ಮಾಡುವ ಗರಿಷ್ಠ ಮೊತ್ತವನ್ನು ರೂ.1.00 ಲಕ್ಷದಿಂದ ರೂ.1.5 ಲಕ್ಷದವರೆಗೆ ಹೆಚ್ಚಿಸಲು (16(ಎ) ಪ್ರಕರಣ);

(7) 21(2)(ಬಿ) ಪ್ರಕರಣದ ಅಡಿಯಲ್ಲಿ ಟ್ರಸ್ಟಿ ಸಮಿತಿಯ ತೀರ್ಪಿನ ವಿರುದ್ಧ ಅಪೀಲಿಗಾಗಿನ ಶುಲ್ಕದ ಮೊತ್ತವನ್ನು ರೂ.100ರಿಂದ ರೂ.500ಕ್ಕೆ ಹೆಚ್ಚಿಸಿ ಅದನ್ನು ನ್ಯಾಯವಾದಿ ಬಾರ್ ಕೌನ್ಸಿಲ್‌ನಲ್ಲಿ ಜಮೆ ಮಾಡಲು;

(8) ವಕಾಲತ್ತಿನ ಮೇಲೆ ಹಚ್ಚುವ ಕಲ್ಯಾಣ ನಿಧಿ ಸ್ಟಾಂಪುಗಳ ಮೊತ್ತವನ್ನು ಉಚ್ಚ ನ್ಯಾಯಾಲಯಕ್ಕಾಗಿ ರೂ.10ರಿಂದ ರೂ.50 ಮತ್ತು ಇತರ ನ್ಯಾಯಾಲಯಗಳಿಗಾಗಿ ರೂ.30ಕ್ಕೆ ಮತ್ತು ವಾದಕಾಲೀನ ಅರ್ಜಿಯ ಸಂಬಂಧದಲ್ಲಿ ರೂ.5ರಿಂದ ರೂ.20ಕ್ಕೆ ಹೆಚ್ಚಿಸಲು (23ನೇ ಪ್ರಕರಣ); ಮತ್ತು

(9) ಹಿರಿಯ ನ್ಯಾಯವಾದಿಗಳ ವಾರ್ಷಿಕ ವಂತಿಗೆಯನ್ನು ರೂ.5,000ದಿಂದ ರೂ.10,000ಕ್ಕೆ ಹೆಚ್ಚಿಸಲು (23(ಎ) ಪ್ರಕರಣ),

–ತಿದ್ದುಪಡಿ ಮಾಡುವುದು ಅವಶ್ಯವೆಂದು ಪರಿಗಣಿಸಲಾಗಿದೆ.

ಕೆಲವು ಆನುಷಂಗಿಕ ಮತ್ತು ಇತರ ತಿದ್ದುಪಡಿಗಳನ್ನು ಕೂಡ ಮಾಡಲಾಗಿದೆ.

ಆದ್ದರಿಂದ ಈ ವಿಧೇಯಕ.

(ತಾತ್ಕಾಲಿಕವಾಗಿ ಅಂಗೀಕರಿಸಲಾಗಿದೆ)

**ಕರ್ನಾಟಕ ವಿಧಾನ ಸಭೆ**
**ಹದಿನಾಲ್ಕನೇ ವಿಧಾನ ಸಭೆ**
**ಹದಿಮೂರನೇ ಅಧಿವೇಶನ**

**ಕರ್ನಾಟಕ ನ್ಯಾಯವಾದಿಗಳ ಕಲ್ಯಾಣ ನಿಧಿ (ತಿದ್ದುಪಡಿ) ವಿಧೇಯಕ, 2017ಕ್ಕೆ (2017ರ ಕರ್ನಾಟಕ ವಿಧಾನ ಸಭೆ ವಿಧೇಯಕ ಸಂಖ್ಯೆ: 01) ತಿದ್ದುಪಡಿ**

**ಟಿ.ಬಿ. ಜಯಚಂದ್ರ , ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಸಣ್ಣ ನೀರಾವರಿ ಮಂತ್ರಿಗಳು ಇವರಿಂದ**

ನಾನು, ಕರ್ನಾಟಕ ನ್ಯಾಯವಾದಿಗಳ ಕಲ್ಯಾಣ ನಿಧಿ (ತಿದ್ದುಪಡಿ) ವಿಧೇಯಕ, 2017ರಲ್ಲಿ (2017ರ ಕರ್ನಾಟಕ ವಿಧಾನ ಸಭೆ ವಿಧೇಯಕ ಸಂಖ್ಯೆ: 01) ಈ ಮುಂದಿನ ತಿದ್ದುಪಡಿಯನ್ನು ತರುವ ನನ್ನ ಉದ್ದೇಶವನ್ನು ಈ ಮೂಲಕ ತಮ್ಮ ಗಮನಕ್ಕೆ ತರಬಯಸುತ್ತೇನೆ, ಎಂದರೆ:-

**ಖಂಡ – 3**

ಸದರಿ ವಿಧೇಯಕದಲ್ಲಿ, 3ನೇ ಖಂಡದ, (1)ನೇ ಉಪಖಂಡದಲ್ಲಿ (ಡಿ) ಬಾಬಿನ ಮೂಲಕ ಸೇರಿಸಲು ಉದ್ದೇಶಿಸಿರುವ ಪರಂತುಕದಲ್ಲಿ " ಪ್ರತಿ ವರ್ಷಕ್ಕೆ ಶೇಕಡ 18ರ ಬಡ್ಡಿ ಸಹಿತ" ಎಂಬ ಪದಗಳು ಮತ್ತು ಅಂಕಿಗಳನ್ನು ಬಿಟ್ಟುಬಿಡತಕ್ಕದ್ದು.

ಎಸ್.ಮೂರ್ತಿ
ಕಾರ್ಯದರ್ಶಿ(ಪ್ರ)
ಕರ್ನಾಟಕ ವಿಧಾನಸಭೆ.

## ಆರ್ಥಿಕ ಜ್ಞಾಪನ ಪತ್ರ

ಪ್ರಸ್ತಾವಿತ ಶಾಸನಾತ್ಮಕ ಕ್ರಮದಿಂದಾಗಿ ಅಂದಾಜು 5.00 ಕೋಟಿ ರೂಪಾಯಿಗಳ ಆವರ್ತಕ ವೆಚ್ಚ ಉಂಟಾಗುತ್ತದೆ.

**ಟಿ.ಬಿ. ಜಯಚಂದ್ರ**
ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಸಣ್ಣ
ನೀರಾವರಿ ಮಂತ್ರಿಗಳು

**ಎಸ್. ಮೂರ್ತಿ**
ಕಾರ್ಯದರ್ಶಿ (ಪ್ರ)
ಕರ್ನಾಟಕ ವಿಧಾನ ಸಭೆ

## ಅನುಬಂಧ

## ಕರ್ನಾಟಕ ನ್ಯಾಯವಾದಿಗಳ ಕಲ್ಯಾಣ ನಿಧಿ ಅಧಿನಿಯಮ, 1983ರ

## (1985ರ ಕೇಂದ್ರ ಅಧಿನಿಯಮ 02) ಉದ್ಧೃತ ಭಾಗ

**XX XX XX**

3. **ನ್ಯಾಯವಾದಿಗಳ ಕಲ್ಯಾಣ ನಿಧಿ.–** (1) ರಾಜ್ಯದಲ್ಲಿನ ನ್ಯಾಯವಾದಿಗಳಿಗೆ ನಿವೃತ್ತಿಯ ನಂತರದ ಪ್ರಯೋಜನಗಳನ್ನು ಸಂದಾಯ ಮಾಡುವುದಕ್ಕಾಗಿ, ರಾಜ್ಯ ಸರ್ಕಾರವು, ಕರ್ನಾಟಕ ನ್ಯಾಯವಾದಿಗಳ ಕಲ್ಯಾಣ ನಿಧಿ ಎಂದು ಕರೆಯಲಾಗುವ ನಿಧಿಯೊಂದನ್ನು ರಚಿಸತಕ್ಕದ್ದು.

(2) ಆ ನಿಧಿಗೆ,– **XX XX XX**

(ಕೆ) 15ನೇ ಪ್ರಕರಣದ ಅಡಿಯಲ್ಲಿ ಪ್ರವೇಶ ಫೀಜುಗಳ ಮೂಲಕ ಸಂಗ್ರಹಿಸಿದ ಮೊಬಲಗುಗಳು;

**XX XX XX**

15. **ನಿಧಿಯ ಸದಸ್ಯತ್ವ.– (1) XX XX XX**

(4) ಹದಿನೈದು ವರ್ಷಗಳ ವೃತ್ತಿಯನ್ನು ಪೂರ್ಣಗೊಳಿಸಿದ ಪ್ರತಿಯೊಬ್ಬ ಸದಸ್ಯನು ನಿಧಿಗೆ ಒಂದು ಸಾವಿರ ರೂಪಾಯಿಗಳ ಶುಲ್ಕವನ್ನು ಸಂದಾಯ ಮಾಡತಕ್ಕದ್ದು ಮತ್ತು ಹದಿನೈದು ವರ್ಷಗಳ ವೃತ್ತಿಯನ್ನು ಪೂರ್ಣಗೊಳಿಸಿರದ ಸದಸ್ಯನು, ಸದಸ್ಯನಾದ ವರ್ಷದ ತರುವಾಯ ಪ್ರತಿವರ್ಷ ಡಿಸೆಂಬರ್ ಮೂವತ್ತೊಂದನೇ ದಿನಾಂಕದಂದು ಅಥವಾ ಮೊದಲು ನಿಧಿಗೆ ಐದುನೂರು ರೂಪಾಯಿಗಳ ಶುಲ್ಕವನ್ನು ಸಂದಾಯ ಮಾಡತಕ್ಕದ್ದು, ಇದಕ್ಕೆ ತಪ್ಪಿದ್ದಲ್ಲಿ, ಈ ಅಧಿನಿಯಮದ ಉದ್ದೇಶಕ್ಕಾಗಿ ಆತನು ಸ್ವಇಚ್ಛೆಯಿಂದ ನ್ಯಾಯವಾದಿ ವೃತ್ತಿಯನ್ನು ನಿಲ್ಲಿಸಿರುವುದಾಗಿ ಭಾವಿಸತಕ್ಕದ್ದು:

ಪರಂತು, ಒಬ್ಬ ಸದಸ್ಯನು, ನಿಗದಿತ ದಿನಾಂಕವು ಮುಕ್ತಾಯವಾದ ತರುವಾಯ ಆರು ತಿಂಗಳೊಳಗಾಗಿ, ತಿಂಗಳೊಂದಕ್ಕೆ ಐವತ್ತು ರೂಪಾಯಿಗಳ ದಂಡದೊಡನೆ ಅಂಥ ಶುಲ್ಕವನ್ನು ಸಂದಾಯ ಮಾಡಬಹುದು, ಇಂಥ ಸಂದರ್ಭದಲ್ಲಿ ಸ್ವಇಚ್ಛೆಯಿಂದ ನ್ಯಾಯವಾದಿ ವೃತ್ತಿಯನ್ನು ನಿಲ್ಲಿಸಿರುವುದಾಗಿ ಅರ್ಥೈಸತಕ್ಕದ್ದಲ್ಲ;

ಮತ್ತು ಪರಂತು, ಹದಿನೈದು ವರ್ಷಗಳ ನ್ಯಾಯವಾದಿ ವೃತ್ತಿಯನ್ನು ಪೂರ್ಣಗೊಳಿಸಿದ ಸದಸ್ಯನು, ಪ್ರತಿ ವರ್ಷ ಶುಲ್ಕವನ್ನು ಸಂದಾಯ ಮಾಡುವುದಕ್ಕೆ ಬದಲಾಗಿ ಹದಿನೈದು ಸಾವಿರ ರೂಪಾಯಿಗಳನ್ನು ಒಂದೇ ಕಂತಿನಲ್ಲಿ ಸಂದಾಯ ಮಾಡಬಹುದು.

**XX XX XX**

(6) (4)ನೇ ಉಪ–ಪ್ರಕರಣದಡಿಯಲ್ಲಿ ವೃತ್ತಿ ನಿಲ್ಲಿಸಿರುವುದಾಗಿ ಭಾವಿಸಿದ ಪ್ರತೀ ವರ್ಷಕ್ಕಾಗಿ, ವಾರ್ಷಿಕ ಮೂರು ಸಾವಿರ ರೂಪಾಯಿಗಳ ಮೊಬಲಗನ್ನು 16ನೇ ಪ್ರಕರಣದ (1)ನೇ ಉಪ–ಪ್ರಕರಣದಡಿಯಲ್ಲಿ ಸಂದಾಯ ಮಾಡತಕ್ಕ ಮೊಬಲಗಿನಿಂದ ಕಳೆಯತಕ್ಕದ್ದು.

ಪರಂತು, (4)ನೇ ಉಪಪ್ರಕರಣದ ಅಡಿಯಲ್ಲಿ ಭಾವಿತವೃತ್ತಿ ನಿಲ್ಲಿಸಿರುವಿಕೆಯು ನಿರಂತರವಾಗಿ ಐದು ವರ್ಷಗಳು ಮತ್ತು ಹೆಚ್ಚಿನ ಅವಧಿಯವರೆಗಿನದ್ದಾಗಿದ್ದಲ್ಲಿ 16ನೇ ಪ್ರಕರಣದ (1)ನೇ ಉಪ ಪ್ರಕರಣದ ಅಡಿಯಲ್ಲಿ ಸಂದಾಯ ಮಾಡಬೇಕಾದ ಮೊಬಲಗು ಒಂದು ಲಕ್ಷ ರೂಪಾಯಿಗಳನ್ನು ಮೀರತಕ್ಕದ್ದಲ್ಲ.

**XX XX XX**

**16. ವೃತ್ತಿಯನ್ನು ನಿಲ್ಲಿಸಿದಾಗ ನಿಧಿಯಿಂದ ಸಂದಾಯ.**– (1) ವೃತ್ತಿಯು,

(i) ಸದಸ್ಯನ ಮರಣದ ಕಾರಣದಿಂದಾಗಿ ನಿಂತುಹೋಗಿದ್ದಲ್ಲಿ, ಆತನ ನಾಮ ನಿರ್ದೇಶಿತನು ಮತ್ತು ನಾಮ ನಿರ್ದೇಶಿತನಿಲ್ಲದಿದ್ದಲ್ಲಿ ಆತನ ಅವಲಂಬಿತರು ಅಥವಾ ಸಂದರ್ಭಾನುಸಾರ ವಾರಸುದಾರರು;

(ii) ಮರಣದ ಹೊರತಾಗಿ ಇತರ ಕಾರಣಗಳಿಂದಾಗಿ ನಿಂತುಹೋಗಿದ್ದಲ್ಲಿ ಸದಸ್ಯನು,

– ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿದ ಮೊಬಲಗನ್ನು ನಿಧಿಯಿಂದ ಸ್ವೀಕರಿಸಲು ಹಕ್ಕುಳ್ಳವನಾಗಿರತಕ್ಕದ್ದು:

ಪರಂತು, ಈ ಮುಂದಿನ ಪ್ರವರ್ಗಗಳ ಸದಸ್ಯರು, ಗರಿಷ್ಠ ಒಂದು ಲಕ್ಷ ಐವತ್ತು ಸಾವಿರ ರೂಪಾಯಿಗಳಿಗೊಳಪಟ್ಟು, ವೃತ್ತಿಯು ಪೂರ್ಣಗೊಂಡ ಪ್ರತಿಯೊಂದು ವರ್ಷಕ್ಕೆ ಐದು ಸಾವಿರ ರೂಪಾಯಿಗಳ ದರದಲ್ಲಿ ಮೊಬಲಗನ್ನು ಪಡೆಯಲು ಹಕ್ಕುಳ್ಳವರಾಗಿರತಕ್ಕದ್ದು, ಎಂದರೆ:–

(i) ಕರ್ನಾಟಕ ನ್ಯಾಯವಾದಿಗಳ ಕಲ್ಯಾಣ ನಿಧಿ (ತಿದ್ದುಪಡಿ) ಅಧಿನಿಯಮ, 2010ರ ಪ್ರಾರಂಭಕ್ಕೆ ಮೊದಲು ಸದಸ್ಯರಾದವರನ್ನು ಹೊರತುಪಡಿಸಿ, ನಲವತ್ತು ವರ್ಷ ವಯಸ್ಸಾದ ತರುವಾಯ ಸದಸ್ಯನಾಗುವ ಒಬ್ಬ ನ್ಯಾಯವಾದಿ;

(ii) ನಲವತ್ತು ವರ್ಷ ವಯಸ್ಸಾದ ತರುವಾಯ. ಹೆಸರುಗಳ ಪಟ್ಟಿಗೆ ಸೇರ್ಪಡೆಯಾದ ನ್ಯಾಯವಾದಿ;

(iii) ಯಾವುದೇ ಉದ್ಯೋಗ, ಉಪವೃತ್ತಿ ಅಥವಾ ವ್ಯವಹಾರದ ಉದ್ದೇಶಗಳಿಗಾಗಿ ಎರಡು ವರ್ಷಗಳಿಗೆ ಮೀರಿದ ಅವಧಿಯವರೆಗೆ ವೃತ್ತಿಯನ್ನು ಸ್ವ ಇಚ್ಛೆಯಿಂದ ನಿಲ್ಲಿಸಿದ್ದ ನ್ಯಾಯವಾದಿ;

(iv) ಸೇವೆಯಿಂದ ಅಥವಾ ಉದ್ಯೋಗದಿಂದ ನಿವೃತ್ತಿಯಾದ, ವಜಾಗೊಂಡ ಅಥವಾ ತೆಗೆದುಹಾಕಲಾದ ತರುವಾಯ ಹೆಸರುಗಳ ಪಟ್ಟಿಯಲ್ಲಿ ಸೇರ್ಪಡೆಯಾದ ನ್ಯಾಯವಾದಿ;

(v) 2000ದ ಆಗಸ್ಟ್ ಒಂದನೇ ದಿನದಂದು ಅಥವಾ ಆ ತರುವಾಯ ಸದಸ್ಯನಾಗಿರುವ ಮತ್ತು ಸದಸ್ಯನಾದ ದಿನಾಂಕದಂದು ಅರವತ್ತು ವರ್ಷ ವಯಸ್ಸಾದ ನ್ಯಾಯವಾದಿ;

(vi) ನಲವತ್ತು ವರ್ಷ ವಯಸ್ಸಾದ ತರುವಾಯ, ಇತರ ರಾಜ್ಯಗಳಿಂದ ವರ್ಗಾವಣೆಯಾಗಿ ಬಂದು ಸದಸ್ಯನಾಗಿರುವ ನ್ಯಾಯವಾದಿ:

ಮತ್ತು ಪರಂತು, 1997ರ ಏಪ್ರಿಲ್ ಎರಡನೇ ದಿನಾಂಕಕ್ಕೆ ಮೊದಲು ಸದಸ್ಯನಾಗಿದ್ದ ಮತ್ತು ಸಂದಾಯ ಮಾಡಬೇಕಾಗಿದ್ದ ಬಾಕಿ ಫೀಜನ್ನು ಸಂದಾಯ ಮಾಡಲು ತಪ್ಪಿರುವ ಮತ್ತು 1997ರ ಏಪ್ರಿಲ್ ಎರಡನೇ ದಿನಾಂಕದ ತರುವಾಯ, ನಿಧಿಗೆ ಪುನ: ಪ್ರವೇಶ ಪಡೆಯದಿರುವ ನ್ಯಾಯವಾದಿಯು, ವೃತ್ತಿಯನ್ನು ಪೂರ್ಣಗೊಳಿಸಿದ ಪ್ರತಿವರ್ಷಕ್ಕೆ ಮೂರು ಸಾವಿರ ರೂಪಾಯಿಗಳ ದರದಲ್ಲಿ, ಆದರೆ ಐವತ್ತು ಸಾವಿರ ರೂಪಾಯಿಗಳನ್ನು ಮೀರದ ಮೊಬಲಗಿಗೆ ಹಕ್ಕುಳ್ಳವನಾಗಿರತಕ್ಕದ್ದು ಮತ್ತು ಆತನು ವೃತ್ತಿ ನಡೆಸುವುದನ್ನು ನಿಲ್ಲಿಸಿದ ಮೇಲೆ ಈ ಮೊಬಲಗನ್ನು ಆತನಿಗೆ ಅಥವಾ ಆತನ ನಾಮನಿರ್ದೇಶಿತರಿಗೆ, ಮತ್ತು ಅವನ ನಾಮನಿರ್ದೇಶಿತರು ಯಾರೂ ಇಲ್ಲದಿರುವಲ್ಲಿ, ಅವನ ಅವಲಂಬಿತರಿಗೆ ಅಥವಾ ಸಂದರ್ಭಾನುಸಾರ ವಾರಸುದಾರರಿಗೆ ಸಂದಾಯಮಾಡತಕ್ಕದ್ದು.

XX XX XX

(6) ನಿಧಿಯಿಂದ ಸಂದಾಯ ಮಾಡುವುದಕ್ಕಾಗಿ ಅರ್ಜಿಯನ್ನು ನಿಯಮಿಸಬಹುದಾದಂಥ ನಮೂನೆಯಲ್ಲಿ ಟ್ರಸ್ಟೀ ಸಮಿತಿಗೆ ಸಲ್ಲಿಸತಕ್ಕದ್ದು.

**XX XX XX**

**16ಎ. ವೈದ್ಯಕೀಯ ಪರಿಹಾರ.–** (1) ನಿಯಮಿಸಬಹುದಾದಂಥ ಗಂಭೀರ ಕಾಯಿಲೆಯಿಂದ ನರಳುತ್ತಿರುವ ಯಾವೊಬ್ಬ ಸದಸ್ಯನು, ನಿಯಮಿಸಲಾದ ಕಾಯಿಲೆಯ ಸಂಬಂಧದಲ್ಲಿ ಚಿಕಿತ್ಸೆ ಪಡೆದುಕೊಂಡರೆ, ಅವನು ಚಿಕಿತ್ಸೆಗಾಗಿ ವಾಸ್ತಕವಾಗಿ ವೆಚ್ಚ ಮಾಡಿದ ಮೊಬಲಗನ್ನು ನಿಧಿಯಿಂದ ಸಂದಾಯ ಮಾಡುವುದಕ್ಕಾಗಿ ನಿಯಮಿಸಬಹುದಾದಂಥ ನಮೂನೆಯಲ್ಲಿ ಅಂಥ ದಸ್ತಾವೇಜುಗಳೊಡನೆ ಟ್ರಸ್ಟಿ ಸಮಿತಿಗೆ ಅರ್ಜಿಯನ್ನು ಸಲ್ಲಿಸಬಹುದು:

ಪರಂತು, ಈ ಪ್ರಕರಣದ ಅಡಿಯಲ್ಲಿ ಸಂದಾಯ ಮಾಡಬೇಕಾದ ಮೊಬಲಗು ಒಂದು ಲಕ್ಷ ರೂಪಾಯಿಗಳು ಅಥವಾ 16ನೇ ಪ್ರಕರಣದ ಅಡಿಯಲ್ಲಿ ಸಂದಾಯ ಮಾಡಬೇಕಾದ ಮೊಬಲಗಿನ ಶೇಕಡಾ ಐವತ್ತರಷ್ಟು – ಇವುಗಳಲ್ಲಿ ಯಾವುದು ಕಡಿಮೆಯೋ ಆ ಮೊಬಲಗನ್ನು ಮೀರತಕ್ಕದ್ದಲ್ಲ.

(2) ಸದಸ್ಯನು ಚಿಕಿತ್ಸೆಯ ದಿನಾಂಕದಂದು ನಿಧಿಯ ಸದಸ್ಯನಾಗಿ ವೃತ್ತಿಯಲ್ಲಿ ಐದು ವರ್ಷಗಳಲ್ಲಿ ಸಂಪೂರ್ಣಗೊಳಿಸಿರತಕ್ಕದ್ದು.

**XX XX XX**

**16ಬಿ. ಆರ್ಥಿಕ ಸಂಕಷ್ಟದ ಸಂದರ್ಭದಲ್ಲಿ ನಿಧಿಯಿಂದ ಭಾಗಶಃ ಸಂದಾಯ.–** (1) ಎಪ್ಪತ್ತು ವರ್ಷ ವಯಸ್ಸು ತುಂಬಿರುವ ಮತ್ತು ನ್ಯಾಯವಾದಿಯಾಗಿ ಇಪ್ಪತ್ತು ವರ್ಷಗಳ ವೃತ್ತಿಯನ್ನು ಪೂರ್ಣಗೊಳಿಸಿರುವ ಮತ್ತು ನಿಧಿಯ ಸದಸ್ಯನಾಗಿ ಹನ್ನೆರಡು ವರ್ಷಗಳನ್ನು ಪೂರ್ಣಗೊಳಿಸಿರುವ ಒಬ್ಬ ಸದಸ್ಯನು, ಹಣಕಾಸಿನ ತೊಂದರೆಯನ್ನು ಎದುರಿಸುತ್ತಿದ್ದರೆ, ನಿಧಿಯಿಂದ ಭಾಗಶಃ ಸಂದಾಯವನ್ನು ನೀಡುವಂತೆ ಕೋರಿ ಟ್ರಸ್ಟಿ ಸಮಿತಿಗೆ, ನಿಯಮಿಸಿದ ನಮೂನೆಯಲ್ಲಿ ಅರ್ಜಿ ಸಲ್ಲಿಸಬಹುದು. ಅಂಥ ಹಣಕಾಸಿನ ತೊಂದರೆಗೆ ಕಾರಣವಾದ ಸಂದರ್ಭವು ನಿಯಮಿಸಬಹುದಾದಂಥದ್ದು ಆಗಿರತಕ್ಕದ್ದು.

(2) ಟ್ರಸ್ಟಿ ಸಮಿತಿಗೆ ಅರ್ಜಿದಾರನ ಕ್ಲೇಮಿನ ಸಂಬಂಧದಲ್ಲಿ ಮನವರಿಕೆಯಾಗಿದ್ದರೆ, ಅದು, ಬಾರ್ ಕೌನ್ಸಿಲ್‌ನ ಪೂರ್ವಾನುಮೋದನೆಯೊಡನೆ 16ನೇ ಪ್ರಕರಣದ ಅಡಿಯಲ್ಲಿ ಅರ್ಜಿದಾರನು ಹಕ್ಕುಳ್ಳ ಶೇಕಡಾ ಐವತ್ತರಷ್ಟಕ್ಕೆ ಸಮನಾದ ಮೊಬಲಗನ್ನು ಅಥವಾ ಒಂದು ಲಕ್ಷ ರೂಪಾಯಿ, ಇವುಗಳಲ್ಲಿ ಯಾವುದು ಕಡಿಮೆಯೋ ಅದನ್ನು ಮಂಜೂರು ಮಾಡಬಹುದು.

**XX XX XX**

**21. ಟ್ರಸ್ಟೀ ಸಮಿತಿಯ ತೀರ್ಮಾನಗಳ ವಿರುದ್ಧ ಅಪೀಲು.–** (1) ಟ್ರಸ್ಟೀ ಸಮಿತಿಯ ಯಾವುದೇ ತೀರ್ಮಾನದ ವಿರುದ್ಧ ಬಾರ್ ಕೌನ್ಸಿಲ್‌ಗೆ ಅಪೀಲು ಹೂಡಲು ಅವಕಾಶವಿರತಕ್ಕದ್ದು.

(2) ಅಪೀಲು ನಿಯಮಿಸಿದ ನಮೂನೆಯಲ್ಲಿರತಕ್ಕದ್ದು, ಮತ್ತು ಅದಕ್ಕೆ,–

(ಎ) ಯಾವ ಅಪೀಲಿನ ವಿರುದ್ಧ ಆದೇಶವಾಗಿದೆಯೋ ಅದರ ಪ್ರತಿ;

(ಬಿ) ಯಾವುದೇ ಅನುಸೂಚಿತ ಬ್ಯಾಂಕಿನ, ಕರ್ನಾಟಕದ ಯಾವುದೇ ಶಾಖೆಯಲ್ಲಿ ಬಾರ್‌ಕೌನ್ಸಿಲ್ ಲೆಕ್ಕಕ್ಕೆ ಜಮೆ ಮಾಡಿದ ಒಂದು ನೂರು ರೂಪಾಯಿಗಳ ಸಂದಾಯ ಮಾಡಿದುದರ ಸಾಕ್ಷ್ಯವಾಗಿ ಒಂದು ರಸೀದಿ;

**XX XX XX**

**23. ವಕಾಲತ್ತು, ಸ್ಟಾಂಪುಗಳನ್ನು ಹೊಂದಿರತಕ್ಕದ್ದು.-** (1) ನಿಧಿಯ ಪ್ರತಿಯೊಬ್ಬ ಸದಸ್ಯನು, ತಾನು ದಾಖಲು ಮಾಡಿದ ಪ್ರತಿಯೊಂದು ವಕಾಲತ್ತಿನ ಮೇಲೆ ಹತ್ತು ರೂಪಾಯಿಗಳ ಮೌಲ್ಯದ ಒಂದು ಕಲ್ಯಾಣ ನಿಧಿ ಸ್ಟಾಂಪನ್ನು ಅಂಟಿಸತಕ್ಕದ್ದು ಮತ್ತು ಹಾಗೆ ಸ್ಟಾಂಪು ಅಂಟಿಸಿರದ ಯಾವುದೇ ವಕಾಲತ್ತನ್ನು ಯಾವುದೇ ನ್ಯಾಯಾಲಯ, ನ್ಯಾಯಾಧೀಕರಣ ಅಥವಾ ಇತರ ಪ್ರಾಧಿಕಾರದ ಮುಂದೆ ದಾಖಲು ಮಾಡತಕ್ಕದ್ದಲ್ಲ ಅಥವಾ ಅದು ಅದನ್ನು ಸ್ವೀಕರಿಸತಕ್ಕದ್ದಲ್ಲ.

(1ಎ) ಪ್ರತಿಯೊಬ್ಬ ನ್ಯಾಯವಾದಿಯು ವಾದಕಾಲೀನ ಅರ್ಜಿಯ ಮೇಲೆ ಐದು ರೂಪಾಯಿಗಳ ಮೌಲ್ಯದ ಕಲ್ಯಾಣ ನಿಧಿಯ ಸ್ಟಾಂಪನ್ನು ಅಂಟಿಸತಕ್ಕದ್ದು.

**XX XX XX**

**23ಎ. ಹಿರಿಯ ನ್ಯಾಯವಾದಿಗಳಿಂದ ವಂತಿಗೆ.-** ಪ್ರತಿಯೊಬ್ಬ ಪದನಾಮೀಕರಿಸಿದ ಹಿರಿಯ ನ್ಯಾಯವಾದಿಯು ಪ್ರತಿ ಆರ್ಥಿಕ ವರ್ಷದಲ್ಲಿ ನಿಧಿಗಾಗಿ ಐದು ಸಾವಿರ ರೂಪಾಯಿಗಳನ್ನು ಮಾರ್ಚ್ 31ರ ಮೊದಲು ವಂತಿಗೆ ನೀಡತಕ್ಕದ್ದು.

**ಅನುಸೂಚಿ**

**[16ನೇ ಪ್ರಕರಣದ (1)ನೇ ಉಪಪ್ರಕರಣವನ್ನು ನೋಡಿ]**

| ವೃತ್ತಿ ಪೂರ್ಣಗೊಂಡ ವರ್ಷಗಳು | ಹಕ್ಕು ಹೊಂದಿರುವಿಕೆ |
|---|---|
| (1) ಹತ್ತು ವರ್ಷಗಳಿಗೆ ಮೀರದಿದ್ದರೆ | ಒಂದು ಲಕ್ಷ ಐವತ್ತು ಸಾವಿರ ರೂಪಾಯಿಗಳು |
| (2) ಹತ್ತು ವರ್ಷಗಳಿಗೆ ಮೀರಿದ್ದು ಆದರೆ ಇಪ್ಪತ್ತು ವರ್ಷಗಳು ಮೀರದಿದ್ದರೆ | ಎರಡು ಲಕ್ಷ ರೂಪಾಯಿಗಳು |
| (3) ಇಪ್ಪತ್ತು ವರ್ಷಗಳಿಗೆ ಮೀರಿದ್ದು ಆದರೆ ಮೂವತ್ತು ವರ್ಷಗಳು ಮೀರದಿದ್ದರೆ | ಎರಡು ಲಕ್ಷ ಐವತ್ತು ಸಾವಿರ ರೂಪಾಯಿಗಳು |
| (4) ಮೂವತ್ತು ವರ್ಷಗಳಿಗೆ ಮೀರಿದ್ದು ಆದರೆ ನಲವತ್ತು ವರ್ಷಗಳು ಮೀರದಿದ್ದರೆ | ಮೂರು ಲಕ್ಷ ಐವತ್ತು ಸಾವಿರ ರೂಪಾಯಿಗಳು |
| (5) ನಲವತ್ತು ವರ್ಷಗಳಿಗೆ ಮೀರಿದ್ದರೆ | ನಾಲ್ಕು ಲಕ್ಷ ರೂಪಾಯಿಗಳು |

ಸರ್ಕಾರಿ ಮುದ್ರಣಾಲಯ, ವಿಕಾಸ ಸೌಧ ಘಟಕ, ಬೆಂಗಳೂರು. ಪಿ7. ಕಾಸೂ , 750–ಪ್ರತಿಗಳು 2ನೇ ಫೆಬ್ರವರಿ, 2017, ಕಾ.ಸೂ. 937

**KARNATAKA LEGISLATIVE ASSEMBLY**
**FOURTEENTH LEGISLATIVE ASSEMBLY**
**THIRTEENTH SESSION**

# THE KARNATAKA ADVOCATES' WELFARE FUND (AMENDMENT) BILL, 2017

**(L.A. Bill No. 1 of 2017)**

A Bill further to amend the Karnataka Advocates' Welfare Fund Act, 1983.

Whereas, it is expedient further to amend the Karnataka Advocates' Welfare Fund Act, 1983 (Karnataka Act 2 of 1985) for the purposes herein after appearing.

Be it enacted by the Karnataka State Legislature in the Sixty-eighth year of the Republic of India as follows:

**1. Short title and commencement.-** (1) This Act may be called the Karnataka Advocates' Welfare Fund (Amendment) Act, 2017.

(2) It shall come into force on such date as the State Government may, by notification appoint.

**2. Amendment of section 3.-** In the Karnataka Advocates' Welfare Fund Act, 1983 (Karnataka Act 2 of 1985) (hereinafter referred to as the Principal Act), in section 3, in sub section (2), in clause (k), for the words "by way of admission fee" the words, "by way of admission fee and any other fee including late fee under section 23A and penalty or contribution if any" shall be substituted.

**3. Amendment of section 15.-** In section 15 of the Principal Act,-

(1) in sub-section (4),-

(a) for the words "rupees one thousand" and "rupees five hundred" the words "rupees two thousand" and "rupees one thousand" shall be substituted respectively;

(b) in the first proviso, for the words "rupees fifty" the words "rupees one hundred" shall be substituted;

(c) in the second proviso, for the words "rupees fifteen thousand" the words "rupees twenty five thousand" shall be substituted; and

(d) after the second proviso, the following provisos shall be inserted, namely;-

"Provided also that a member who has already paid a lumpsum amount of rupees fifteen thousand before the date of commencement of the Karnataka Advocates' Welfare Fund (Amendment) Act, 2017 shall pay the balance amount of rupees ten thousand within one year from the date of such commencement or pay a sum of rupees one thousand every year along with an interest at the rate of 18 percent per annum on or before thirty first day of December till the balance is cleared failing which he shall be deemed to have voluntarily suspended practice for the purpose of this Act:

Provided also that where a member pays balance of such lumpsum amount within one year from the expiry of the due date along with a penalty of rupees one hundred per month it shall not be construed as deemed voluntary suspension of practice."

(2) in subsection (6),-

(a) for the words "rupees five thousand" the words "rupees ten thousand" shall be substituted;

(b) in the proviso, for the words "one lakh rupees" the words "two lakh rupees" shall be substituted.

(3) after sub section (6) the following shall be inserted, namely :-

"(7) Notwithstanding anything contained in this Act if a member who,-

(a) has completed fifty years of practice and paid all the arrears to the fund; or

(b) having been enrolled as an advocate before completion of an age of forty years has attained an age of seventy five years,

fails to pay fees and penalty, if any, under subsection (4) or contribution and late fee under sub-sections (1) and (2) of section 23A he shall be eligible to claim entire amount payable to him under sub-section (1) of section 16 without deduction of any

amount towards arrears of fee and penalty due under sub-section (4) or contribution or late fee due under sub-sections (1) and (2) of section 23A."

**4. Amendment of section 16.-** In section 16 of the principal Act,-

(1) in sub-section (1),-
(a) in the first proviso,-
   (i) for the words "five thousand rupees" and "rupees one lakh fifty thousand" the words "ten thousand rupees" and "rupees three lakhs" shall respectively be substituted.
   (ii) for clause (iii), the following shall be substituted, namely:-
   "(iii) an advocate who has voluntarily suspended practice for a period exceeding three years for the purpose of any employment, avocation or business or for appointment to an office of Chairperson, Vice-Chairperson or Member of any Commission, Corporation, Committee, Board, Body or other authority, either statutory or non-statutory constituted by any Central Government or any State Government."

(b) in the second proviso, for the words "three thousand rupees" and "rupees fifty thousand" the words "five thousand rupees" and "rupees one lakh" shall be substituted respectively.

(2) after sub-section (6), the following proviso shall be inserted, namely:-

"Provided that if a member who has opted for payment of fees in a lumpsum, makes an application claiming amount specified in the schedule on account of cessation of practice on the ground of voluntary retirement he should have paid the entire lumpsum amount along with penalty, if any, specified in the second, third and fourth provisos to sub-section (4) of section 15 before making such application or should give a written consent for deduction of the lumpsum fee and penalty, if any, due at the time of final settlement of the amount."

(6A) Where applications are received from members under sub-section (6) on account of cessation of practice on the ground of voluntary retirement total number of applications which may be considered for payment under this section during a year shall be fixed by the trustee committee having regard to its financial position, feasibility of future operation of the fund, need of the applicant and other relevant factors."

**5. Amendment of section 16A.-** In section 16A of the principal Act, in the proviso, for the words "rupees one lakh" the words "rupees one lakh fifty thousand" shall be substituted.

**6. Amendment of section 16B.-** In section 16B of the principal Act,-

(i) in sub-section (1), for the words "age of seventy years" the words "age of sixty five years" shall be substituted.

(ii) in sub-section (2), for the words "or one lakh rupees" the words "or one lakh fifty thousand rupees" shall be substituted.

**7. Amendment of section 21.-** In section 21 of the principal Act, in sub-section (2), for clause (b), the following shall be substituted, namely:-

"(b) a receipt for having paid rupees five hundred in the office of the Bar Council."

**8. Amendment of section 23.-** In section 23 of the Principal Act,-

(i) for sub-section (1), the following shall be substituted, namely:-

"(1) Every Advocate shall affix welfare Fund stamps of the value of rupees fifty on every vakalath filed by him in the High court and rupees thirty on every vakalath filed by him in any court, other than High court or in any tribunal or other authority and no vakalat shall be filed before or received by, the High Court or any court, tribunal or other authority unless it is so stamped."

(ii) in sub-section (1A), for the words "rupees five", the words "rupees twenty" shall be substituted.

**9. Amendment of section 23A.-** In section 23 A of the principal Act, in sub-section (1), for the words "rupees five thousand", the words "rupees ten thousand" shall be substituted.

**10. Substitution of schedule.-** For Schedule to the Principal Act, the following shall be substituted, namely:-

**"SCHEDULE**

(See subsection (1) of section 16)

| | Completed No. of year of practice | Entitlement |
|---|---|---|
| 1) | Not exceeding fifteen years | Rupees four lakhs |
| 2) | Exceeding fifteen years but not exceeding Thirty five years | Rupees six lakhs |
| 3) | Above Thirty five years | Rupees eight lakhs" |

**11. Transitory provision.-** Notwithstanding anything contained in the principal Act as amended by this Act, the Trustee committee shall not entertain any application under sub-section (6) of section 16 of Principal Act in respect of claims due to cessation of practice on the ground of voluntary retirement for a period of one year from the date of commencement of this Act.

**STATEMENT OF OBJECTS AND REASONS**

It is considered necessary to amend the Karnataka Advocates' Welfare Fund Act, 1983 (Karnataka Act 2 of 1985) to,-

(1) enhance Advocate Welfare Fund annual Membership fee,-
   (i) for completion of 15 years of practice from Rs.1,000 to Rs.2,000;
   (ii) non completion of 15 years of practice from Rs.500 to Rs.1,000; and
   (iii) for failure penalty from Rs.50 to Rs.100 (Section 15(4));

(2) enhance the lumpsum fee of Rs.15,000 to Rs.25,000 in lieu of payment of fee every year (Section 15(4));

(3) enhance the amount payable where deemed suspension due to cessation of practice is more than five years from Rs.1.00 to Rs.2.00 lakhs (Section 15(6));

(4) enhance the amount at the rate from Rs.5,000 to Rs.10,000 for every completed year subject to maximum from Rs.1.5 lakh to Rs.3.00 lakh towards payment from the fund on cessation of membership to member or nominee or legal heirs (Section 16(1));

(5) extend the period of minimum practice from two years to three years who has voluntarily suspended practice due to any employment or on appointment to an office of Chairperson, Vice-Chairperson or Member of any Commission, Corporation, Committee, Board, Body or other authority, either statutory or non-statutory constituted by any Central Government or any State Government (Section 16(1)(iii));

(6) enhance the maximum amount payable towards medical relief from Rs.1.00 lakh to Rs.1.5 lakh (Section 16A);

(7) enhance the fee amount for appeal against Trustee Committee under section 21(2)(b) from Rs.100 to Rs.500 towards the credit of the Advocate Bar Council;

(8) enhance vakalath amount to bear welfare fund stamps from Rs.10 to Rs.50 for High Court and Rs. 30 for other Courts (Section 23); and from Rs.5 to Rs.20 in respect Interlocutory Application.

(9) enhance Senior Advocates' yearly contribution from Rs.5000 to Rs.10,000 (section 23A).

Certain consequential and other amendments are also made.

Hence, the Bill.

**(Provisionally admitted)**

**KARNATAKA LEGISLATIVE ASSEMBLY**

**FOURTEENTH LEGISLATIVE ASSEMBLY**

**THIRTEENTH SESSION**

Amendment to the Karnataka Advocates' Welfare Fund (Amendment), Bill, 2017 (L.A.Bill No. 1 of 2017)

By Shri T.B.Jayachandra, Minister for Law, Parliamentary Affairs and Minor Irrigation.

I hereby give notice of my intention to move the following amendment to the Karnataka Advocates' Welfare Fund (Amendment) Bill, 2017 (L.A.Bill No. 1 of 2017) namely:-

**Clause-3**

In the said Bill, in clause 3, in sub-clause (1), in item (d), in the proviso sought to be inserted, the words and figures "along with an interest at the rate of 18 percent per annum" shall be omitted.

**S. MURTHY**
**Secretary (I/C)**

**FINANCIAL MEMORANDUM**

There will be an approximate recurring expenditure of Rs. 5.00 Crores by the proposed legislative measure.

**T.B.JAYACHANDRA**
Minister for Law, Parliamentary Affairs
and Minor Irrigation

**S.Murthy**
Secretary (I/C)
Karnataka Legislative Assembly

# ANNEXURE

## EXTRACT FROM THE KARNATAKA ADVOCATES' WELFARE FUND ACT, 1983.

### (KARNATAKA ACT 2 OF 1983)

**XX** **XX** **XX**

**3. Advocates' Welfare Fund.-** (1) The State Government shall constitute a fund called the Karnataka Advocates' Welfare Fund for the payment of retirement and other benefits to the advocates and their dependents, in the State.

(2) There shall be credited to the Fund,- **XX** **XX** **XX**

(k) amounts collected under section 15 by way of admission fee.

**XX** **XX** **XX**

**15. Membership of the Fund.-** **XX** **XX** **XX**

(4) Every member who has completed fifteen years of practice shall pay a fee of rupees one thousand to the fund and who has not completed fifteen years of practice shall pay a fee of rupees five hundred to the fund on or before the thirty first day of December of every year, next after the year of becoming member, failing which, he shall be deemed to have voluntarily suspended practice for the purpose of this Act:

Provided that a member may pay such fee within six months from the expiry of the due date along with a penalty of rupees fifty per month, in which case it shall not be construed as deemed voluntary suspension of practice:

Provided further that a member who has completed fifteen years of practice may, in lieu of payment of fee every year, pay in a lumpsum rupees fifteen thousand.

**XX** **XX** **XX**

(6) For every year of deemed suspension under sub-section (4) an amount of rupees five thousand per annum shall be deducted from out of the amount payable under sub-section (1) of section 16.

Provided that where a deemed suspension under sub-section (4) is consecutively for a period of five years and more, amount payable under sub-section (1) of section 16 shall not exceed one lakh rupees.

**XX** **XX** **XX**

**16. Payment from the Fund on cessation of practice.-** (1) Where the cessation of practice,-

(i) is due to death of a member, his nominee and if there is no nominee, to his dependents or heirs as the case may be; or

(ii) is due to reasons other than death, the member, shall be entitled to receive an amount specified in the schedule, from out of the fund:

Provided that the following categories of members shall be entitled to receive an amount at the rate of five thousand rupees for every completed year of practice subject to a maximum of rupees one lakh fifty thousand namely:-

(i) an advocate who becomes member after attaining an age of forty years except those who have become members prior to the commencement of the Karnataka Advocates' Welfare Fund (Amendment ) Act, 2010;

(ii) an advocate enrolled after attaining an age of forty years;

(iii) an advocate who has voluntarily suspended practice for a period exceeding two years for the purposes of any employment, avocation or business;

(iv) an advocate enrolled after retirement, dismissal or removal from service or employment;

(v) an advocate who has become member on or after the first day of August 2000 and has attained an age of sixty years on the date of becoming member;

(vi) an advocate who becomes member on transfer from other states, after attaining an age of forty years:

Provided further that an advocate who had become member prior to the second day of April, 1997 and has failed to pay balance fee due and has not been re-admitted to the fund after the second day of April, 1997, shall be entitled only to an amount at the rate of three thousand rupees for every completed year of practice but not exceeding an amount of rupees fifty thousand and this amount shall be paid to him or to his nominees, and where there are no nominees to his dependants or heirs as the case may be on cessation of practice.

**XX** **XX** **XX**

(6) An application for payment from the Fund shall be preferred to the trustee committee in such form as may be prescribed.

**XX** **XX** **XX**

**16A. Medical relief.-** (1) If any member suffering from such serious ailment as may be prescribed undergoes treatment for the prescribed ailment, he may apply to the Trustee committee in such form along with such documents as may be prescribed for payment from the fund towards the amount actually incurred for the treatment:

Provided that, the amount payable under this section shall not exceed rupees one lakh or fifty percent of the amount payable under section 16, whichever is less.

(2) The member should have completed five years of practice as a member of the fund on the date of treatment.

**XX XX XX**

**16B. Part payment from the fund during financial hardship.-** (1) A member who has attained the age of seventy years and has completed twenty years of practice as an advocate and twelve years as a member of the fund is facing a financial hardship may apply in a prescribed form to the trustee committee seeking part payment from the fund. The Situation leading to such financial hardship shall be such as may be prescribed.

(2) If the trustee committee is satisfied with the claim of the applicant it may, with the prior approval of the Bar Council, sanction an amount equivalent to fifty percent of entitlement of the applicant under section 16 or one lakh rupees whichever is less.

**XX XX XX**

**21. Appeal against decisions of trustee committee.-**

**XX XX XX**

(2) The appeal shall be in the prescribed form and shall be accompanied by,-
(a) a copy of the order appealed against; and

(b) a receipt evidencing payment of one hundred rupees to the credit of the Bar Council, in any of the branches in Karnataka of any Scheduled Bank.

**XX XX XX**

**23. Vakalath to bear stamps.-** (1) Every Advocate shall affix welfare Fund stamps of the value of rupees ten on every vakalath filed by him and no vakalath shall be filed before or received by any court, tribunal or other authority unless it is so stamped.

(1A) Every Advocate shall affix Welfare Fund stamp of the value of rupees five one every interlocutory application.

**XX XX XX**

**23A. Contribution by Senior Advocate.-** (1) Every designated Senior Advocate shall contribute rupees five thousand in every financial year to the Fund before thirty first March.

**XX XX XX**

## SCHEDULE

(see sub-section (1) of section 16)

| Completed years of practice | Entitlement |
|---|---|
| (1) Not exceeding ten years | Rupees one lakh fifty thousand |
| (2) Exceeding ten years but not exceeding twenty years | Rupees two lakhs |
| (3) Exceeding twenty years but not exceeding thirty years | Rupees two lakhs fifty thousand |
| (4) Exceeding thirty years but not exceeding forty years | Rupees three lakhs fifty thousand |
| (5) Exceeding forty years | Rupees four lakhs |

**XX XX XX**

Government Press, Vikasa Soudha Unit, Bengaluru 1st february, 2017 P7, W.D.937, Copies 1000